**ಕರ್ನಾಟಕ ಸರ್ಕಾರ**

**ಸಂಖ್ಯೆ:** ಡಿಟಿಇ 19 ಡಿವಿಪಿ(2) 2013

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ: 23/04/2014.

**ಸುತ್ತೋಲೆ**

ವಿಷಯ: 2014-15ನೇ ಸಾಲಿಗೆ ರಾಜ್ಯದಲ್ಲಿ ಹಾಲಿ ಇರುವ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಪಾಲಿಟೆಕ್ನಿಕ್‌ಗಳಿಗೆ ಎಐಸಿಟಿಇಯ ಮಾನ್ಯತೆ ವಿಸ್ತರಿಸಿರುವ ಬಗ್ಗೆ- ರಾಜ್ಯ ಸರ್ಕಾರದ ಮಾನ್ಯತೆ ಪಡೆಯುವ ಕುರಿತು.

ಉಲ್ಲೇಖ:
1) ನವದೆಹಲಿಯ ಎಐಸಿಟಿಇಯ ಸದಸ್ಯ ಕಾರ್ಯದರ್ಶಿಯವರು ಪ್ರಮುಖ ದಿನಪತ್ರಿಕೆಗಳಲ್ಲಿ ಹಾಗೂ ವೆಬ್ ಪೋರ್ಟಲ್‌ನಲ್ಲಿ ನೀಡಲಾಗಿರುವ ಸಾರ್ವಜನಿಕ ಪ್ರಕಟಣೆ ಸಂಖ್ಯೆ: ಎಡಿವಿಟಿ ನಂ: ಎಬಿ 01(01)/2014, ದಿನಾಂಕ: 18/1/2014.
2) 2014-15ನೇ ಸಾಲಿಗೆ ನವದೆಹಲಿಯ ಎಐಸಿಟಿಇಯು ವೆಬ್ ಪೋರ್ಟಲ್‌ನಲ್ಲಿ ನೀಡುವ ಅನುಮೋದನೆ.
3) ನಿರ್ದೇಶನಾಲಯದ ಸಮ ಸಂಖ್ಯೆ ಸುತ್ತೋಲೆ ದಿನಾಂಕ: 26/3/2014.

-0-

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ(3)ರಲ್ಲಿ ನಮೂದಿಸಿರುವ ಈ ನಿರ್ದೇಶನಾಲಯದ ಸಮ ಸಂಖ್ಯೆ ಸುತ್ತೋಲೆ ದಿನಾಂಕ: 26/3/2014ರ ಕಡೆಗೆ ತಮ್ಮ ಗಮನವನ್ನು ಸೆಳೆಯ ಬಯಸುತ್ತೇನೆ. ಸದರಿ ಸುತ್ತೋಲೆಯಲ್ಲಿ ನೀಡಿರುವ ಸೂಚನೆಯ ಮೇರೆಗೆ ಹಲವು ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರು 2014-15ನೇ ಸಾಲಿಗೆ ಸಂಬಂಧಿಸಿದಂತೆ ಪಾಲಿಟೆಕ್ನಿಕ್‌ಗಳಿಗೆ ನವದೆಹಲಿಯ ಎಐಸಿಟಿಇ ಯು ಮಾನ್ಯತೆ ವಿಸ್ತರಿಸಿರುವ ಪತ್ರದ ಪ್ರತಿಗಳನ್ನು ಕಳುಹಿಸಿರುತ್ತಾರೆ ಮತ್ತು ಇನ್ನು ಹಲವು ಪಾಲಿಟೆಕ್ನಿಕ್‌ಗಳಿಂದ ಎಐಸಿಟಿಇಯ ಮಾನ್ಯತೆ ಪತ್ರವನ್ನು ನಿರೀಕ್ಷಿಸಲಾಗುತ್ತಿದೆ.

2014-15ನೇ ಸಾಲಿಗೆ ರಾಜ್ಯದ ಎಲ್ಲಾ ಸರ್ಕಾರಿ ಅನುದಾನಿತ ಹಾಗೂ ಖಾಸಗಿ ಪಾಲಿಟೆಕ್ನಿಕ್‌ಗಳಿಗೆ ರಾಜ್ಯ ಸರ್ಕಾರದ ಮಾನ್ಯತೆ ಪಡೆಯಲು ಹಾಗೂ ಕೋರ್ಸುವಾರು ಪ್ರವೇಶಾತಿಯನ್ನು ನಿಗಧಿಪಡಿಸುವ ದಿಸೆಯಲ್ಲಿ ಸೂಕ್ತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಬೇಕಾಗಿದೆ. ಆದ್ದರಿಂದ ವೆಬ್ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳುವ ನಿಮ್ಮ ಪಾಲಿಟೆಕ್ನಿಕ್‌ಗೆ ಸಂಬಂಧಿಸಿದ 2014-15ನೇ ಸಾಲಿಗೆ ಎಐಸಿಟಿಇಯು ಅನುಮೋದನೆ ನೀಡಿರುವ ಪತ್ರದ 03 ದೃಢೀಕೃತ (ಪ್ರಿನ್ಸಿಪಾಲರ ಸಹಿ ಮತ್ತು ಮೊಹರಿನೊಂದಿಗೆ) ಪ್ರತಿಗಳನ್ನು ದಿ: 06/05/2014 ರೊಳಗಾಗಿ ನಿರ್ದೇಶನಾಲಯಕ್ಕೆ ಕಳುಹಿಸಬೇಕಾಗಿ ತಿಳಿಸಲಾಗಿದೆ.

ಈಗಾಗಲೇ ಎಐಸಿಟಿಇಯ ಮಾನ್ಯತೆ ಪತ್ರವನ್ನು ನಿರ್ದೇಶನಾಲಯಕ್ಕೆ ಕಳುಹಿಸಿರುವ ಪ್ರಿನ್ಸಿಪಾಲರುಗಳು ಪುನ: ಕಳುಹಿಸುವ ಅವಶ್ಯಕತೆ ಇರುವುದಿಲ್ಲ.

(ಎ.ಎಂ.ಭೋಜೇದಾರ್)
ಜಂಟಿ ನಿರ್ದೇಶಕರು (ಎಟಿಎಸ್)

23/4/2014 23/4/14 23/4/14

ಇವರಿಗೆ,

1. ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ.
2. ಶ್ರೀ ಶ್ರೀನಿವಾಸ, ಉಪನ್ಯಾಸಕರು, ಇ-ಗೌರ್‌ನೆನ್ಸ್ ಸೆಲ್, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರಿಗ ಮಾಹಿತಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ.